ಶ್ರೀ ಸಿ.ಎಂ. ಲಿಂಗಪ್ಪ : ಮಾನ್ಯ ಅಧ್ಯಕ್ಷರೆ, ನನ್ನದೊಂದು ಕ್ರಿಯಾಲೋಪ ಇದೆ. ಏನೆಂದರೆ, ಯಾರೇ ಒಬ್ಬ ಮಾನ್ಯ ಸದಸ್ಯರು ಪ್ರಶ್ನೆ ಕೇಳುವಾಗ, ಭಾಷಣ ಮಾಡುವಾಗ ಸದನದಲ್ಲಿ ಅತ್ತಿಮದಿತ್ತ ತಿರುಗಾಡುತ್ತಿರುವ ಸದಸ್ಯರಿಗೆ ತಾವು ಹೇಳಬೇಕಾಗುತ್ತದೆ. ಸಭೆಯಲ್ಲಿ ಶಿಸ್ತು ಕಾಪಾಡದೆ ಹೋದರೆ ಬಹಳ ಕಷ್ಟವಾಗುತ್ತದೆ. ಸದನದಲ್ಲಿ ತಿರುಗಾಡುವಂಥ ಅನಿವಾರ್ಯತೆ ಬಂದಾಗ ತಲೆ ತಗ್ಗಿ ಹೋಗಬೇಕಾಗುತ್ತದೆ. ಮಾನ್ಯ ಮಹಿಳಾ ಸದಸ್ಯರು ಪ್ರಶ್ನೆ ಕೇಳಲು ನಿಂತಿದ್ದರೂ ತಿರುಗಾಡವವರು ತಿರುಗಾಡುತ್ತಲೇ ಇದ್ದಾರೆ.

ಅಧ್ಯಕ್ಷರು : ಮಾನ್ಯ ಸದಸ್ಯರು ಅರ್ಥಮಾಡಿಕೊಳ್ಳಬೇಕು. ಪ್ರಶ್ನೋತ್ತರ ವೇಳೆಯಲ್ಲಿ ಸುಮ್ಮನೆ ಕುಳಿತುಕೊಳ್ಳುವುದಕ್ಕೆ ಕಲಿಯಬೇಕು. ಪ್ರಶ್ನೋತ್ತರ ಮುಗಿದ ನಂತರ ಓಡಾಡಿ ಅಥವಾ ಮೊಗಸಾಲೆಗೆ ತೆರಳಿ ಮಾತನಾಡಿ, ನನ್ನದೇನೂ ಅಭ್ಯಂತರವಿಲ್ಲ.

ಶ್ರೀ ಬಿ.ಬಿ.ಚಿಮ್ಮನಕಟ್ಟಿ : ಸನ್ಮಾನ್ಯ ಅಧ್ಯಕ್ಷರೆ, ಚಿಕ್ಕಬಳ್ಳಾಪುರ ಪಟ್ಟಣಕ್ಕೆ ಒಳಚರಂಡಿ ವ್ಯವಸ್ಥೆಯಾಗಬೇಕೆಂದು ಮಾನ್ಯ ಸದಸ್ಯರು ಕೇಳಿದ್ದು, ಈಗಾಗಲೇ ಅಲ್ಲಿ ಕುಡಿಯುವ ನೀರಿನ ಯೋಜನೆಯನ್ನು ಕೈಗೆತ್ತಿಕೊಂಡಿದ್ದು, ಸದರಿ ಯೋಜನೆಯನ್ನು ಆದಷ್ಟು ಶೀಘ್ರವಾಗಿ ಅಂದರೆ ಮುಂದಿನ ಏಪ್ರಿಲ್ ತಿಂಗಳಿನೊಳಗೆ ಮುಗಿಸುತ್ತೇವೆ. ನಂತರ ಒಳಚರಂಡಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳುತ್ತೇವೆ.

ಕೆ.ಜಿ.ಎಫ್.ನಲ್ಲಿ ಅನಧಿಕೃತ ಸೇಂದಿ ಮಾರಾಟಗಾರರು

141(1505) ಶ್ರೀ ಎಂ. ಭಕ್ತವತ್ಸಲಂ(ಕೆ.ಜಿ.ಎಫ್.) : ಮಾನ್ಯಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸೇಂದಿ ಮಾರಾಟವನ್ನು ಕರ್ನಾಟಕದಲ್ಲಿ ನಿಷೇಧಿಸಲಾಗಿದೆಯೇ?

ಆ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮವೇನು?

ಶ್ರೀ ಎಸ್.ಎಂ.ಕೃಷ್ಣ(ಮುಖ್ಯ ಮಂತ್ರಿ)

ಅ) ರಾಜ್ಯದಲ್ಲಿ ಮೂರ್ತೆದಾರರ ಸಹಕಾರ ಸಂಘಗಳ ಮೂಲಕ ದಕ್ಷಿಣ ಕನ್ನಡ, ಉಡುಪಿ, ಗುಲ್ಬರ್ಗಾ, ಮತ್ತು ರಾಯಚೂರು ಜಿಲ್ಲೆಗಳಲ್ಲಿ ಸೇಂದಿ ಮಾರಾಟಕ್ಕೆ ಅವಕಾಶ ಇದ್ದು, ಇದನ್ನು ಹೊರತುಪಡಿಸಿ ಉಳಿದ ಜಿಲ್ಲೆಗಳಲಿ ಸೇಂದಿ ಮಾರಾಟವನ್ನು ನಿಷೇಧಿಸಲ್ಪಟ್ಟಿದೆ.

ಆ) ಸೇಂದಿ ಮಾರಾಟದ ನಿಷೇಧವು ಅನುಸರಣೆಯಾಗುವಂತೆ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಶ್ರೀ ಎಂ. ಭಕ್ತವತ್ಸಲಂ: ಮಾನ್ಯ ಅಧ್ಯಕ್ಷರೆ, ನಾನು ಕೇಳಿರುವ ಪ್ರಶ್ನೆಗೆ ಉತ್ತರವಾಗಿ ಗುಲ್ಬರ್ಗಾ, ರಾಯಚೂರು, ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಸೇಂದಿ ಮಾರಾಟಕ್ಕೆ ಅನುಮತಿ ನೀಡಲಾಗಿದೆಯೆಂದು ತಿಳಿಸಿದ್ದಾರೆ. ಮತ್ತು ಉಳಿದ ಬೇರೆ ಜಿಲ್ಲೆಗಳಲ್ಲಿ ಸೇಂದಿ ಮಾರಾಟ ಮಾಡಲು ಅನುಮತಿ ಕೊಟ್ಟಿಲ್ಲವೆಂದು ಸಹ ಹೇಳಿದ್ದಾರೆ. ಸೇಂದಿ ಕುರಿತು ಹೇಳಬೇಕೆಂದರೆ, ನನ್ನ ಕ್ಷೇತ್ರವಾದ, ಕೆ.ಜಿ.ಎಫ್. ಸೇಂದಿ ಸಾಮ್ರಾಜ್ಯವಾಗಿದೆ. ಕೆಜಿ ಎಫ್‌ನಲ್ಲಿನ ಚಾಂಪಿಯನ್ ರೀಫ್, 'ಹೆಚ್' ಬ್ಲಾಕ್ ಮನೆ ನಂ.42 ರಲ್ಲಿ ಕೃತಕ ಸೇಂದಿ ಕಾರ್ಖಾನೆಯೊಂದನ್ನು ಪ್ರಾರಂಭಿಸಿ ಕೆ ಜಿ ಎಫ್ ದಾದ್ಯಂತ

ಕಾನೂನುಬಾಹಿರವಾಗಿ ಸರಬರಾಜು ಮಾಡುತ್ತಿದ್ದಾರೆ. ಇದನ್ನು ಸೇವಿಸಿರುವ ಬಹಳಷ್ಟು ಕುಟುಂಬಗಳು ಹಾಳಾಗಿದ್ದು, ಈ ಕೃತಕ ಸೇಂದಿಯನ್ನು ಕುಡಿದವರು ತಮ್ಮ ಕಣ್ಣು, ಕೈ, ಕಾಲುಗಳನ್ನೆಲ್ಲಾ ಕಳೆದುಕೊಂಡಿದ್ದಾರೆ. ಪ್ರಸ್ತುತ ವರ್ಷದಲ್ಲಿ ಬಿ.ಜಿ.ಎಂ.ಎಲ್.ಗೆ ಸೇರಿರುವ ಸುಮಾರು ಹತ್ತು ಜನ ನೌಕರರು ತೀರಿ ಹೋಗಿದ್ದಾರೆ. ಈ ಕುರಿತು ಸೂಕ್ತ ಕ್ರಮ ಕೈಗೊಳ್ಳಬೇಕೆಂದು ನಾನು ಜಿಲ್ಲಾಧಿಕಾರಿಗಳಿಗೆ , ಎಕ್ಸೈಸ್ ಡಿ.ಸಿ.ಯವರೊಗೆ ಹಾಗೂ ಸೂಪರಿಂಟೆಂಡ್ ಆಫ್ ಪೊಲೀಸ್ ರವರಿಗೂ ಪತ್ರ ಕೊಟ್ಟರೂ ಯಾವುದೇ ಕ್ರಮ ತೆಗೆದುಕೊಂಡಿರುವುದಿಲ್ಲ. ಕೆ.ಜಿ ಎಫ್ ನಲ್ಲಿ ಎಲ್ಲಿ ನೋಡಿದರಲ್ಲಿ ಕಾನೂನುಬಾಹಿರವಾಗಿ ಕೃತಕ ಸೇಂದಿಯನ್ನು ಸರಬರಾಜು ಮಾಡುತ್ತಿರುವುದರಿಂದ ಇವರ ಮೇಲೆ ಸರ್ಕಾರ ಏನು ಕ್ರಮ ಕೈಗೊಳ್ಳುತ್ತದೆಂಬುದನ್ನು ಹೇಳಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು) (ಮಾನ್ಯ ಮುಖ್ಯಮಂತ್ರಿಯವರ ಪರವಾಗಿ): ಮಾನ್ಯ ಅಧ್ಯಕ್ಷರೆ, ರಾಜ್ಯದ ಗುಲ್ಬರ್ಗ, ರಾಯಚೂರು, ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳನ್ನು ಹೊರತುಪಡಿಸಿ ಬೇರೆ ಜಿಲ್ಲೆಗಳಲ್ಲಿ ಸೇಂದಿ ಮಾರಾಟ ಮಾಡಬಾರದೆಂದು ಈಗಾಗಲೇ ನಿಷೇಧಿಸಿದ್ದೇವೆ. ಕೆ.ಜಿ.ಎಫ್.ನಲ್ಲಿ ಮನೆಯೊಂದರಲ್ಲಿ ಕಾರ್ಖಾನೆ ಮಾಡಿಕೊಂಡು ಕೃತಕ ಸೇಂದಿಯನ್ನು ತಯಾರಿಸಿ ಕಾನೂನುಬಾಹಿರವಾಗಿ ಮಾರಾಟ ಮಾಡುತ್ತಿದ್ದು, ಇದನ್ನು ಸೇವಿಸಿದ ಅನೇಕ ಜನರು ತಮ್ಮ ಪ್ರಾಣ ಕಳೆದುಕೊಂಡಿದ್ದಾರೆಂದು ಈಗ ತಾನೇ ಸರ್ಕಾರದ ಗಮನಕ್ಕೆ ಮಾನ್ಯ ಸದಸ್ಯರು ತಂದಿದ್ದಾರೆ. ಮಾನ್ಯ ಸದಸ್ಯರು ಸೂಪರಿಂಟೆಂಡೆಂಟ್ ಆಫ್ ಪೊಲೀಸಿನವರಿಗೆ ಕ್ರಮ ಕೈಗೊಳ್ಳಬೇಕೆಂದು ಕೋರಿ ಬರೆದ ಪತ್ರದ ಪ್ರತಿಯನ್ನು ನನಗೂ ಕೊಟ್ಟಿದ್ದರೆ ಖಂಡಿತವಾಗಿಯೂ ಕ್ರಮ ಜರುಗಿಸುತ್ತಿದ್ದೆ. ಸೇಂದಿ ಮಾರಾಟ ಮಾಡಲು ಎಲ್ಲೆಲ್ಲಿ ಅನುಮತಿ ನೀಡಲಾಗಿದೆಯೋ ಆ ಕಡೆಗಳಲ್ಲಿ ಸೇಂದಿ ಹೆಸರಿನಲ್ಲಿ ಕ್ಲೋರೋ ಹೈಡ್ರೇಟ್ ಬಳಸಿ ಕೃತಕ ಸೇಂದಿ ಮಾರಾಟ ಮಾಡುತ್ತಿರುವ ಕುರಿತು ಅನೇಕ ದೂರುಗಳೂ ಬರುತ್ತಿದ್ದು, ಈ ಕುರಿತು ಪೋಲಿಸಿನವರು ಕೆಲವು ಕಾರ್ಯಕ್ರಮಗಳನ್ನು ,ಹಮ್ಮಿಕೊಂಡಿದ್ದಾರೆ. ಕೆ.ಜಿ.ಎಫ್.ನಲ್ಲಿ ಎರಡು ಪ್ರಕರಣಗಳನ್ನು ದಾಖಿಸಿ ಕೊಂಡಿದ್ದು, ಒಂದು ದಿವಸ ಸುಮಾರು ಮೂವತ್ತು ಲೀಟರ್‌ಗಳಷ್ಟು ಸೇಂದಿ ಹಾಗೂ ಮತ್ತೊಂದು ದಿವಸ ಸುಮಾರು ಮೂವತ್ತೈದು ಲೀಟರ್‌ಗಳಷ್ಟು ಸೇಂದಿ ಹಾಗೂ ಮತ್ತೊಂದು ದಿವಸ ಸುಮಾರು ಮೂವತ್ತೈದು ಲೀಟರ್‌ಗಳಷ್ಟು ಸೇಂದಿಯನ್ನು ಹೊತ್ತುವಶಪಡಿಸಿಕೊಂಡು ಸೀಜ್ ಮಾಡಲಾಗಿದೆ. ಕೆ.ಜಿ.ಎಫ್.ನಲ್ಲಿರುವ ಒಂದು ಮನೆಯೊಂದರಲ್ಲಿ ಕೃತಕ ಸೇಂದಿ ತಯಾರಿಸಲಾಗುತ್ತಿದೆಯೆಂದು ಮಾನ್ಯ ಸದಸ್ಯರು ಏನು ಹೇಳಿದ್ದಾರೆ, ಈ ರೀತಿಯಾಗಿ ಅಲ್ಲಿ ಅನಧಿಕೃತವಾಗಿ, ಕಾನೂನುಬಾಹಿರವಾಗಿ ಸೇಂದಿಯನ್ನು ತಯಾರಿಸಿ ಮಾರಾಟ ಮಾಡುತ್ತಿದ್ದರೆ ಸಂಬಂಧಪಟ್ಟ ಸೂಪರಿಟೆಂಡೆಂಟ್ ಆಫ್ ಪೊಲೀಸಿನವರಿಗೆ, ಎಕ್ಸೈಸ್ ಸೂಪರಿಂಟೆಂಡ್ ಟ್ ರವರಿಗೆ ಇವೊತ್ತೇ ಆದೇಶ ನೀಡಿ ತನಿಖೆ ನಡೆಸಿ ತಪ್ಪಿತಸ್ಥರ ಮೇಲೆ ಕ್ರಮ ಜರುಗಿಸಬೇಕೆಂದು ಸೂಚಿಸುತ್ತೇನೆ. ಮತ್ತು ಸರ್ಕಾರದ ಅನುಮತಿ ಇಲ್ಲದೆ ಎಲ್ಲೆಲ್ಲಿ ಇಂತಹ ಅವ್ಯವಹಾರ ನಡೆಯುತ್ತಿದೆಯೋ ಅದನ್ನು ತಡೆಗಟ್ಟುವುದಕ್ಕೆ ಸರ್ಕಾರ ಪ್ರಯತ್ನ ಮಾಡುತ್ತದಲ್ಲದೆ, ಅನುಮತಿ ಕೊಟ್ಟಿರುವ ಜಿಲ್ಲೆಗಳಲ್ಲಿ ಕೂಡ ಕ್ಲೋರೋ ಹೈಡ್ರೇಟ್ ಹಾಕಿ ಕೃತಕ ಸೇಂದಿ ಮಾರಾಟ ಮಾಡುತ್ತಿದ್ದರೆ ಅಲ್ಲಿಯೂ ಕ್ರಮ ಜರುಗಿಸುವಂಥ ಕೆಲಸ ಮಾಡುತ್ತೇವೆ.

ಶ್ರೀ ಎಂ. ಭಕ್ತವತ್ಸಲಂ : ಕೆಜಿ ಎಫ್ ಸೇಂದಿಗೆ ರಾಸಾಯನಿಕ ಪುಡಿಯನ್ನು ಮಿಶ್ರಣ ಮಾಡಿ ಮಾರಾಟ ಮಾಡುತ್ತಿರುವ ವಿಷಯ ಬಹಳ ವರ್ಷಗಳಿಂದ ಎಕ್ಸೈಸ್ ಇಲಾಖೆಗೆ, ಪೊಲೀಸ್ ಇಲಾಖೆಗೆ ಮತ್ತು ಸ್ಥಳೀಯ ಪೊಲೀಸಿನವರಿಗೆ ತಿಳಿದಿದ್ದರೂ ಯಾವುದೇ ಕ್ರಮ ತೆಗೆದುಕೊಂಡಿರುವುದಿಲ್ಲ. ಪೊಲೀಸಿನವರು ಒಂದು ದಿವಸ ಅಲ್ಲಿಗೆ ಹೋಗುತ್ತಾರೆ, ಕೇಸ್ ದಾಖಲಿಸಿಕೊಳ್ಳುತ್ತಾರೆ, ಬರುತ್ತಾರೆ, ಮುಂದೆ ಏನೂ ಕ್ರಮ ಜರುಗಿಸುವುದಿಲ್ಲ. ಆಪರು ತಮ್ಮ ಅಕ್ರಮ ದಂಧೆಯನ್ನು ಮುಂದುವರೆಸುತ್ತಾರೆ. ಅಲ್ಲಿ ತಯಾರಿಸಲಾಗುತ್ತಿರುವ ಕೃತಕ ಸೇಂದಿಯನ್ನು ಅಲ್ಲಿನ ಪೊಲೀಸಿನವರು ತಡೆಗಟ್ಟುತ್ತಾರೆಂಬುದರಲ್ಲಿ ನನಗೆ ನಂಬಿಕೆಯಿಲ್ಲ. ನಾನು ಈ ಸದನದ ಮೂಲಕ ತಮ್ಮಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ಕೃತಕ ಸೇಂದಿಯನ್ನು ತಕ್ಷಣ ನಿಲ್ಲಿಸಿ ಸಂಬಂಧಪಟ್ಟವರ ಮೇಲೆ ಕಟ್ಟುನಿಟ್ಟಿನ ಕ್ರಮವನ್ನು ಕಾನೂನಿನ ಪ್ರಕಾರ ಜರುಗಿಸಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಖಂಡಿತವಾಗಿಯೂ ಗಂಭೀರವಾದ ಕ್ರಮ ಜರುಗಿಸುತ್ತೇವೆ.

ಶ್ರೀ ಡಿ.ವಿ. ಸದಾನಂದಗೌಡ : ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಹಕಾರ ಸಂಘಗಳ ಮುಖಾಂತರ ಸೇಂದಿ ಮಾರಾಟ ಮಾಡುತ್ತಿದ್ದು, ಲೀಟರ್ ಫೀ ಎಂದು ಸರ್ಕಾರ ಏನು ಛಾರ್ಜ್ ವಿಧಿಸಿದೆ, ಇದನ್ನು ಮನ್ನಾ ಮಾಡುವುದಾಗಿ ಸರ್ಕಾರ ತಿಳಿಸಿರುವುದರಿಂದ, ಈ ಕುರಿತು ಸರ್ಕಾರದ ಸ್ಪಷ್ಟ ನಿಲುವು ಏನೆಂದು ತಿಳಿಸಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಆ ಕುರಿತ ಉತ್ತರ ಈಗ ನನ್ನ ಹತ್ತಿರವಿಲ್ಲ.

ಶ್ರೀ ಕೆ. ಹೆಚ್. ಹನುಮೇಗೌಡ : ಹಾಸನದಲ್ಲಿ ನಡೆಯುತ್ತಿರುವ ಪ್ರಕರಣವನ್ನು ತಮ್ಮ ಗಮನಕ್ಕೆ ತರುವುದಾದರೆ, ಅಲ್ಲಿ ತೆಂಗಿನ ಮರದಿಂದ ಇಳಿಸಿದಾ 'ನೀರಾ' ಕ್ಕೆ ಸಮಾಜಘಾತುಕ ಶಕ್ತಿಗಳು ಗಾಂಜಾ, ಗುಟ್ಕಾ, ಮುಂತಾದವೆಲ್ಲವನ್ನೂ ಮಿಶ್ರಣ ಮಾಡಿ ಜನರಿಗೆ ಹಂಚುತ್ತಿದ್ದು, ಇದರಿಂದ ಜನರ ಆರೋಗ್ಯ ಹಾಳಾಗುತ್ತಿದ್ದು ಅವರೆಲ್ಲರೂ ಸರ್ವನಾಶವಾಗುತ್ತಿರುವುದರಿಂದ ಈ ರೀತಿ ಯಥೇಚ್ಚವಾಗಿ ನಿರ್ಭೀತಿಯಿಂದ ಎಸಗುತ್ತಿರುವ ಕೃತ್ಯ ಸರ್ಕಾರದ ಗಮನಕ್ಕೆ ಬಂದಿಲ್ಲವೇ? ಹಿಂದೆ ವೀರೇಂದ್ರ ಪಾಟೀಲರು ಮುಖ್ಯಮಂತ್ರಿಗಳಾಗಿದ್ದಂತ ಸಂದರ್ಭದಲ್ಲಿ ನಾನು ಹಾಗೂ ಹೆಚ್.ಕೆ.ಪಾಟೀಲರು ಮುಖ್ಯಮಂತ್ರಿಗಳನ್ನು ಭೇಟಿಯಾಗಿ ಸೇಂದಿ ಹೆಸರಿನಲ್ಲಿ ಕ್ಲೋರೋ ಹೈಡ್ರೇಟ್ ಅನ್ನು ಮಿಶ್ರಣ ಮಾಡಿ ಮಾರಾಟ ಮಾಡಲಾಗುತ್ತಿದೆಯೆಂದು ಅವರ ಗಮನಕ್ಕೆ ತಂದಾಗ ಮೂರು ದಿವಸ ಬಿಟ್ಟು ಬನ್ನಿ ಎಂದು ನಮಗೆ ಹೇಳಿದರು. ಮೂರು ದಿವಸ ಬಿಟ್ಟು ಹೋದಾಗ, ನಿಜ ಹನುಮೇಗೌಡರೆ, ಈಚಲು ಮರ, ತೆಂಗಿನ ಮರ ಎರಡರಲ್ಲೂ ಇಲ್ಲ, ನಾವು ಹೇಳಿದ್ದನ್ನೇ ಮಿಕ್ಸ್ ಮಾಡುತ್ತಿದ್ದಾರೆಂದು ಅದನ್ನು ಬ್ಯಾನ್ ಮಾಡುವ ನಿರ್ಧಾರವನ್ನು ತೆಗೆದುಕೊಂಡರು. ಆ ಪುಣ್ಯಾತ್ಮ ತೆಗೆದುಕೊಂಡ ನಿರ್ಧಾರದಿಂದ ಲಕ್ಷಾಂತರ ರೈತರು, ಕೂಲಿ ಕಾರ್ಮಿಕರು ಉಳಿದುಕೊಂಡಿದ್ದಾರೆ. ಆದರೆ ಈಗ ತೆಂಗಿನ ಮರಕ್ಕೆ ನುಸಿರೋಗ ಬಂದಿದೆ ಅದನ್ನು ನಿಯಂತ್ರಣ ಮಾಡುವ ಸಲುವಾಗಿ 'ನೀರಾ' ಮಾಡಲು ಅವಕಾಶ ಕೊಡುತ್ತೇವೆಂದರೆ ಹೇಗೆ, ಆ ರೋಗಕ್ಕು ಇದಕ್ಕೂ ಏನು ಸಂಬಂಧ? ಕಾನೂನು ಮೀರಿ ಇದನ್ನು ಮಾಡಲು ಹೋದರೆ ಸರ್ಕಾರ ಇರುತ್ತದೆಯೇ? ಜನರ ಆರೋಗ್ಯ ಏನಾಗುತ್ತದೆ? ಹೇಳುವವರು ಕೇಳುವವರು ಯಾರೂ ಬೇಡವೆ? ತಮ್ಮ ಇಲಾಖೆಯವರೇನು ಮಾಡುತ್ತಿದ್ದಾರೆ? ನಾನು ಪೋಲೀಸ್‌ನವರನ್ನು ಕೇಳಿದರೆ, ಏನು ಮಾಡುವುದು ಇಲ್ಲಿ ಹೋದರೆ ಅಲ್ಲಿ ಕಟ್ಟುತ್ತಾರೆ, ಅಲ್ಲಿ ಹೋದರೆ ಇಲ್ಲಿ ಕಟ್ಟುತ್ತಾರೆಂದು ಹೇಳುತ್ತಾರೆ.

ತಪ್ಪು ಅಬ್ಬಾರಿ ಇಲಾಖೆಯವರೇನು ಮಾಡುತ್ತಿದ್ದಾರೆ? ಇದನ್ನು ನಿಲ್ಲಿಸದಿದ್ದರೆ ಜನರು ಸರ್ವನಾಶವಾಗುತ್ತಾರೆ, ಹೋರಾಟವಾಗುತ್ತದೆ, ಗ್ರಾಮಾಂತರ ಪ್ರದೇಶದ ರೈತರು, ಕೂಲಿ ಕಾರ್ಮಿಕರು ನಾಶವಾಗುತ್ತಾರೆ, ಅವರೆಲ್ಲರು ನಮಗೆ ಮತವನ್ನು ಕೊಟ್ಟು ಅಧಿಕಾರಕ್ಕೆ ತಂದಿದ್ದಾರೆ, ಆನರುಗಳ ಶಾಪಕ್ಕೆ ತಾವು ಒಳಗಾಗಬೇಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ಸರ್ಕಾರದ ನಿಲುವನ್ನು ಸ್ಪಷ್ಟವಾಗಿ ಹೇಳಿದ್ದೇನೆ. ತಾವು ಹೇಳಿದಂತೆ ಮಾನ್ಯ ವೀರೇಂದ್ರಪಾಟೀಲರ ಕಾಲದಲ್ಲಿ ಇಡೀ ಕರ್ನಾಟಕದಲ್ಲಿ ಸೇಂದಿಯನ್ನು ನಿರ್ಬಂದ ಮಾಡಲಾಗಿತ್ತು. ಆದರೆ ಕಾರಣಾಂತರಗಳಿಂದ ಅನಂತರ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಸೇಂದಿ ಉತ್ಪಾದನೆಗೆ ಅವಕಾಶ ನೀಡಲಾಯಿತು. ಅನಂತರ ಮೂರ್ತಿದಾರರು, ಟ್ಯಾಪರ್ಸ್‌ಗಳಿಗೆ ಕೆಲಸಕೊಡಬೇಕು, ನಿರುದ್ಯೋಗ ಬಹಳ ಇದೆ ಅವರಿಗೆ ಕೆಲಸ ಕೊಡಬೇಕು ಎಂದು ಹೇಳಿಕೊಂಡು ರಾಯಚೂರು ಮತ್ತು ಗುಲ್ಬರ್ಗಾದಲ್ಲಿ ಸೇಂದಿ ಉತ್ಪಾದನೆಗೆ ಅವಕಾಶ ನೀಡಲಾಗಿದೆ. ಸೇಂದಿಯನ್ನು ಈ ಹಿಂದೆ ಹೇಗೆ ನಿರ್ಬಂದ ಮಾಡಲಾಗಿತ್ತೋ ಅದೇ ರೀತಿ ಈಗಲೂ ಮಾಡಬೇಕು ಎಂಬ ನಿಲುವು ಸರ್ಕಾರದ್ದು, ಮುಖ್ಯಮಂತ್ರಿಯವರದ್ದು ಆಗಿದೆ. ಇವತ್ತೂ ಕೆಲವು ಕಡೆ ಕ್ಲೋರೋ ಹೈಡ್ರೇಟನ್ನು ಹಾಕಿ ಸೇಂದಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಎಲ್ಲೆಲ್ಲಿ ಇಂಥ ಕೆಲಸವನ್ನು ಮಾಡುತ್ತಿದ್ದಾರೆ ಅವರ ಮೇಲೆ ನಿರ್ಧಾಕ್ಷಿಣ್ಯವಾಗಿ ಕ್ರಮ ತೆಗೆದುಕೊಳ್ಳಲು ನಾನು ಆದೇಶವನ್ನು ಕೊಡುತ್ತೇನೆ. ಇದರಿಂದ ಅನೇಕ ಜನರು ಸವನ್ನು ಅನುಭವಿಸುತ್ತಿದ್ದಾರೆ ಎಂದು ನಮ್ಮ ಗಮನಕ್ಕೆ ತಂದಿದ್ದೀರಿ. ಅದರ ಆಧಾರದ ಮೇಲೆಯೇ ಈ ಹಿಂದೆ ಸರ್ಕಾರ ಸೇಂದಿ ಉತ್ಪಾದನೆಯನ್ನು ನಿರ್ಬಂದಿಸಿತ್ತು, ಆದರೆ ಕಾರಣಾಂತರಗಳಿಂದ ನಾಲ್ಕು ಜಿಲ್ಲೆಗಳಲ್ಲಿ ಈಗ ಅವಕಾಶ ಕೊಡಲಾಗಿದೆ. ತಾವು ನೀರಾದ ಬಗ್ಗೆ ಹೊಸದಾಗಿ ಹೇಳಿದ್ದೀರಿ. ಮಾನ್ಯ ಬೈರೇಗೌಡರು, ನೀರಾ ಮಾಡುವುದಕ್ಕೆ ಒಂದು ಸಲ ಅವಕಾಶ ಕೊಡಿ ಆಗ ನುಸಿ ರೋಗವನ್ನು ಇದರಿಂದ ತಡೆಗಟ್ಟಲು ಸಾಧ್ಯವಿದೆಯೆಂದು ಇಲ್ಲಿ ಒಂದು ಸಲ ಪ್ರಸ್ತಾಪ ಮಾಡಿದ್ದರು. ಆದರೆ ಅದರ ಹೆಸರಿನಲ್ಲಿ ಜನರನ್ನು ಹಾಳು ಮಾಡುವ ತಂತ್ರವೂ ಇರಬಹುದು. ಇವರೆರಡರ ಬಗ್ಗೆಯೂ ನಾವು ಪರಿಶೀಲನೆ ಮಾಡಬೇಕಾಗುತ್ತದೆ. ಕ್ಲೋರೋ ಹೈಡ್ರೇಟ್ ಉಪಯೋಗ ಮಾಡಿ ಜನರನ್ನು ಹಾಳು ಮಾಡುತ್ತಿರುವವರಿಗೆ ಶಿಕ್ಷೆಗೆ ಗುರಿ ಮಾಡುವುದು ಒಂದು ಕಡೆಯಾದರೆ ಮತ್ತೊಂದು ಕಡೆ ತೆಂಗಿನ ಗಿಡಕ್ಕೆ ಬಂದಿರುವ ರೂಗವನ್ನು ತಡೆಗಟ್ಟಲು ಯಾವ ರೀತಿ ಕ್ರಮ ತೆಗೆದುಕೊಳ್ಳಬೇಕು ಎಂಬ ಬಗ್ಗೆ ನಾವು ಪರಿಶೀಲನೆ ಮಾಡಬೇಕಾಗುತ್ತದೆ.

ಶ್ರೀ ಸಿ.ಬೈರೇಗೌಡ : ಮಾನ್ಯ ಅಧ್ಯಕ್ಷರೆ, ಸೇಂದಿಯನ್ನು ರದ್ದು ಮಾಡಬೇಕು ಎಂದು ಮೊದಲು ಧ್ವನಿಗೂಡಿಸಿದವನು ನಾನು. ಕಾರಣವೇನೆಂದರೆ, ಸಾಮಾನ್ಯ ಜನರಲ್ಲಿ ಆರೋಗ್ಯ ನಾಶವಾಗುವ ನಿಟ್ಟಿನಲ್ಲಿ ನಿಜವಾದ ಸೇಂದಿಯನ್ನು ಉಪಯೋಗಿಸದೆ ಕ್ಲೋರೋ ಹೈಡ್ರೇಟ್ ಅನ್ನು ಉಪಯೋಗಿಸಲಾಗುತ್ತಿತ್ತು. ಅದನ್ನು ತಿಳಿದು ಇದರ ಬಗ್ಗೆ ನಾನು ತೀವ್ರವಾದ ವಿರೋಧವನ್ನು ಮಾಡಿದ್ದೆ. ಆದರೆ ಈಗ ಪರಿಸ್ಥಿತಿ ಬದಲಾವಣೆಯಾಗಿದೆ. ರಾಜ್ಯದಲ್ಲಿ ತೆಂಗು ರೈತರಿಗೆ ಬಹಳ ಮುಖ್ಯವಾದ ಬೆಳೆಯಾಗಿದೆ. ನಮ್ಮ ತೋಟದಲ್ಲಿ ಬೆಳೆದಿರುವ ತೆಂಗನ್ನೇ ಇಂದು ಕೇಳುವವರು ಇಲ್ಲದೆ ರಸ್ತೆಗೆ ಹಾಕುವ ಪರಿಸ್ಥಿತಿ ಬಂದಿದೆ. ಲಕ್ಷಾಂತರ ತೆಂಗಿನ ಕಾಯಿಗಳನ್ನು ಮನೆಯಲ್ಲಿಟ್ಟುಕೊಂಡಿರುವ ರೈತರು ಒಂದು ಕಡೆ ಇದ್ದಾರೆ. ಮತ್ತೊಂದು ಕಡೆ ಲಕ್ಷಾಂತರ ತೆಂಗಿನ ಮರಗಳನ್ನು ರೈತರು ಕಡಿಯುತ್ತಿದ್ದಾರೆ. ತೆಂದು ನೂರೈವತ್ತು

ವರ್ಷ ಇರುವ ಗಿಡ. ಪ್ರೀತಿಯಿಂದ ಬೆಳೆಸಿರುವ ಮರಗಳನ್ನು ಕೈಯಾರೆ ಕಡಿಯುತ್ತಿರುವ ದೃಶ್ಯ ಎಲ್ಲಾ ಕಡೆ ಇದೆ. ಏಕೆಂದರೆ ಅದರಿಂದ ಏನೂ ಆದಾಯ ಬರುತ್ತಿಲ್ಲ, ಎಲ್ಲಾ ಕಡೆ ರೋಗ ಬಂದಿದೆ. ಆದ್ದರಿಂದ ತಾತ್ಕಾಲಿಕವಾಗಿ ಮೂರ್ನಾಲ್ಕು ವರ್ಷಗಳ ಕಾಲ ಸೇಂದಿ ಉತ್ಪಾದನೆ ಮಾಡುವುದಕ್ಕೆ, ನೀರಾವನ್ನು ಉತ್ಪಾದನೆ ಮಾಡುವುದಕ್ಕೆ ಅವಕಾಶ ಕೊಡಬೇಕಾಗುತ್ತದೆ. ಸೇಂದಿ ಬೇಡ ಎಂದು ಹೇಳಿರುವುದರಲ್ಲಿ ಮೊದಲಿಗನ ನಾನೇ, ರೈತರ ದೃಷ್ಟಿಯಿಂದ ಮೂರ್ನಾಲ್ಕು ವರ್ಷ ಸೇಂದಿ ಉತ್ಪಾದನೆಗೆ ಅವಕಾಶವನ್ನು ಕೊಡಬೇಕು. ಆದೊಂದು ಬಿಟ್ಟರೆ ಇಲ್ಲಿ ಮತ್ತಾವ ಉದ್ದೇಶವೂ ಇಲ್ಲ.

ಶ್ರೀ ಕೆ.ಹೆಚ್. ಹನುಮೇಗೌಡ: ಯಾರೋ ತೆಂಗಿನ ಮರಗಳನ್ನು ಕಡಿದುಬಿಟ್ಟರು ಎಂಬುದಕ್ಕಾಗಿ ಇಡೀ ದೇಶ ಇದನ್ನು ಅನುಭವಿಸಬೇಕೇ?

(ಗೊಂದಲ)

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ : ಇಲ್ಲಿ ಇಬ್ಬರೂ ಕೋಪ ಮಾಡಿಕೊಳ್ಳುವ ಅವಶ್ಯಕತೆ ಇಲ್ಲ. ತಾವಿಬ್ಬರೂ ಕೃಷಿಯಲ್ಲಿ ಅತ್ಯಂತ ಪ್ರಾವಿಣ್ಯತೆಯನ್ನು ಹೊಂದಿರುವಂಥವರು. ತೆಂಗಿನ ಬಗ್ಗೆ ತಮ್ಮಿಬ್ಬರಿಗೂ ಬಹಳ ಮಾಹಿತಿ ಗೊತ್ತಿದೆ. ಆದರೆ ಇಲ್ಲಿ ತಮ್ಮಿಬ್ಬರ ಅಭಿಪ್ರಾಯ ಬೇರೆ ಬೇರೆಯಾಗಿದೆ. ಸೇಂದಿಗೆ ಕ್ಲೋರೋಹೈಡ್ರೇಟ್‌ನು ಹಾಕಿ ಮಾಡುವುದಕ್ಕೆ ಎಲ್ಲೂ ಸರ್ಕಾರ ಅವಕಾಶ ಕೊಡುವುದಿಲ್ಲ. ತೆಂಗಿಗೆ ನುಸಿ ರೋಗ ಬಂದಿದೆ, ಆದ್ದರಿಂದ ನೀರಾ ಮಾಡಲು ಅವಕಾಶ ಕೊಡಬೇಕೆಂದೇನು ಸಲಹೆ ಬಂದಿದೆ ಅದರ ಬಗ್ಗೆ ನಾವು ಪರಿಶೀಲನೆ ಮಾಡಬೇಕಾಗಿರುತ್ತದೆ. ಒಂದು ವೇಳೆ ನೀರಾವನ್ನು ಮಾಡಲು ನಾವು ಅವಕಾಶವನ್ನು ಕೊಟ್ಟರೆ ಮಾನ್ಯ ಹನುಮೇಗೌಡರು ಹೇಳಿದಂತೆ ಸಮಾಜ ಘಾತುಕ ಶಕ್ತಿಗಳು ಇದನ್ನೇ ನೆಪವನ್ನಾಗಿ ಮಾಡಿಕೊಂಡು ಇಡೀ ಕರ್ನಾಟಕದಲ್ಲಿ ಪುನಃ ಕಲಬೆರಕೆ ಸೇಂದಿಯನ್ನು ಜನರಿಗೆ ಕುಡಿಸಿ ಆರೋಗ್ಯವನ್ನು ನಾಶಮಾಡುವ ಪ್ರಯತ್ನಗಳು ನಡೆಯಬಹುದು. ಟ್ಯಾಪರ್ಸ್‌ಗೆ ನೌಕರಿ ಕೊಡಬೇಕು, ಅವರಲ್ಲಿರುವ ನಿರುದ್ಯೋಗದ ನಿವಾರಣೆ ಸಲುವಾಗಿ ರಾಯಚೂರಿನ ಮೂರು ತಾಲ್ಲೂಕಿನಲ್ಲಿ, ಗುಲ್ಬರ್ಗಾದ ಐದು ತಾಲ್ಲೂಕಿನಲ್ಲಿ ಸೇಂದಿ ಮಾಡಲು ಅವಕಾಶ ಕೊಡಲಾಗಿದ್ದು ಇದರಿಂದ ಅಲ್ಲಿನ ಜನರಲ್ಲಿ ಯಾವ ಪ್ರಮಾಣದಲ್ಲಿ ಆರೋಗ್ಯ ಕೆಡುತ್ತಿದೆ ಎಂಬುದು ತಮಗೂ ಗೊತ್ತಿರಬಹುದು. ಇದರ ಬಗ್ಗೆ ತಮ್ಮ ಪಕ್ಷದ ಕಾರ್ಯಕರ್ತರು ತಮಗೂ ಹೇಳಿರಬಹುದು. ಆದ್ದರಿಂದ ಜನರ ಆರೋಗ್ಯದ ದೃಷ್ಟಿಯ ಬಗ್ಗೆ ನಾವು ಗಮನಹರಿಸಬೇಕಾಗುತ್ತದೆ. ರೈತರುಗಳು ಎಷ್ಟು ಇದ್ದಾರೋ ಅಷ್ಟೇ ಮಂದಿ ರೈತರಿಗೆ ಸಹಾಯ ಮಾಡುವ ಕೂಲಿಕಾರ್ಮಿಕರು ಇದ್ದಾರೆ. ಇವತ್ತು ಅಂಥವರೇ ಸೇಂದಿಯನ್ನು ಕುಡಿಯತಕ್ಕವರು. ಅತ್ಯಂತ ಬಡವರೇ ಸೇಂದಿಯನ್ನು ಕುಡಿಯತಕ್ಕವರು. ಆದ್ದರಿಂದ ನೀರಾವನ್ನು ಮಾಡುವ ಬಗ್ಗೆ ತಕ್ಷಣವೇ ಜಾರಿಗೆ ತರುತ್ತೇವೆಮದು ಹೇಳುವುದಕ್ಕಾಗುವುದಿಲ್ಲ, ಇದರ ಬಗ್ಗೆ ಆಳವಾಗಿ ಯೋಚನೆ ಮಾಡಬೇಕಾಗುತ್ತದೆ. ಇದರ ಬಗ್ಗೆ ಸಮಗ್ರವಾಗಿ ಚಿಂತನೆ ಮಾಡಿ ಅನಂತರ ಅಂತಿಮ ತೀರ್ಮಾನಕ್ಕೆ ಬರಬೇಕಾಗುತ್ತದೆ. ಸೇಂದಿ ಉತ್ಪಾದನೆ, ಮಾರಾಟಕ್ಕೆ ಅವಕಾಶ ಕೊಡುವ ಅಗತ್ಯತೆ ನಮ್ಮ ರಾಜ್ಯಕ್ಕೆ ಇಲ್ಲ ಎಂಬುದು ನಮ್ಮ ನಿಲುವಾಗಿದೆ. ಆ ನಿಲುವನ್ನೇ ನಾವು ಮುಂದುವರೆಸಿಕೊಂಡು ಹೋಗುತ್ತೇವೆ.

(ಗೊಂದಲ)

ಅಧ್ಯಕ್ಷರು : ಮಾನ್ಯ ಹನುಮೇಗೌಡರೇ, ಮಾನ್ಯ ಸಚಿವರು ತಮ್ಮ ಪ್ರಶ್ನೆಗೆ ಉತ್ತರವನ್ನು ಹೇಳಿದ್ದಾರೆ. ತಾವು ದಯಮಾಡಿ ಕುಳಿತುಕೊಳ್ಳಿ.

(ಗೊಂದಲ)

ಅಧ್ಯಕ್ಷರು : ಯಾವುದನ್ನೂ ರೆಕಾರ್ಡ್ ಮಾಡಬೇಡಿ

(ಗೊಂದಲ)

ಶ್ರೀ ಕೆ.ಎಂ. ಕೃಷ್ಣಮೂರ್ತಿ : ಮಾನ್ಯ ಅಧ್ಯಕ್ಷರೇ, ಕ್ಲೋರೋ ಹೈಡ್ರೇಟ್ ಅನ್ನು ಮಿಕ್ಸ್ ಮಾಡಿರುವ ಸೇಂದಿಯನ್ನು ಕುಡಿದರೆ ಆರೋಗ್ಯ ಕೆಡುತ್ತದೆ. ಬ್ರಾಂದಿ ಕುಡಿದರೆ ಆರೋಗ್ಯ ಕೆಡುವುದಿಲ್ಲವೇ? ವಾಸ್ತವವಾಗಿ ನುಸಿ ರೋಗ ತೆಂಗಿನ ಬೆಳೆಗಳಿಗೆ ಬಂದಿರುವ ಕಾರಣದಿಂದಾಗಿ ರೈತರು ಕಂಗಾಲಾಗಿದ್ದಾರೆ. ಇಡೀ ರಾಜ್ಯಾದ್ಯಂತ ನುಸಿ ರೋಗ ಇದೆ. ಇವತ್ತು ಆ ನುಸಿ ರೋಗವನ್ನು ತಡೆಗಟ್ಟಬೇಕಾಗಿದ್ದರೆ ಸರ್ಕಾರ ಸೇಂದಿಯನ್ನು ಇಲಿಸಲಿಕ್ಕೆ ಅವಕಾಶ ಮಾಡಿಕೊಡಬೇಕು. ನಮ್ಮಲ್ಲಿರುವಂತಹ ತೆಂಗಿನ ಮರಗಳಿಂದ ಸೇಂದಿಯನ್ನು ಇಳಿಸಿದರೆ ಕ್ಲೋರೋ ಹೈಡ್ರೇಟ್ ಅನ್ನು ಮಿಕ್ಸ್ ಮಾಡುವಂತಹ ಅವಕಾಶ ಇರುವುದಿಲ್ಲ ಎನ್ನುವುದು ನನ್ನ ಅಭಿಪ್ರಾಯ. ದಯವಿಟ್ಟು ಸರ್ಕಾರ ಮತ್ತೆ ಸೇಂದಿಯನ್ನು ಇಳಿಸಲಿಕ್ಕೆ ಅವಕಾಶ ಮಾಡಿಕೊಟ್ಟರೆ ರೈತರಿಗೆ ಅನುಕೂಲವಾಗುತ್ತದೆ. ಇದರ ಜೊತೆಗೆ ನುಸಿ ರೋಗವನ್ನೂ ಸಹಾ ತಡೆಗಟ್ಟಲು ಸಾಧ್ಯವಾಗುತ್ತದೆ ಎಂಬ ವಿಚಾರವನ್ನು ನಾನು ಸಂಬಂಧಪಟ್ಟ ಸಚಿವರ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೇ, ನಾನು ಮಾನ್ಯ ಹನುಮೇಗೌಡರ ಕ್ಷಮೆ ಯಾಚಿಸಿ ಒಂದು ಮಾತನ್ನು ಮಾನ್ಯ ಅಧ್ಯಕ್ಷರ ಮೂಲಕ ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ಸರ್ಕಾರ ಬ್ಯಾನ್ ಮಾಡುವುದಾದರೆ ಷರಾಬನ್ನೂ ಸಹಾ ಬ್ಯಾನ್ ಮಾಡಲಿ. ಕೆಟ್ಟ ಸಾರಾಯಿಯ ರೀತಿಯಲ್ಲಿ ಈ ಸೇಂದಿ ಇರುವುದಿಲ್ಲ. ಬಹಳ ಹಿಂದೆ ನಮ್ಮ ಮಲೆನಾಡಿನಲ್ಲಿ ಮೈಸೆ ಎಂಬ ಮರದಿಂದ ಇದನ್ನು ಇಳಿಸುತ್ತಿದ್ದರು. ಇದು ನೈಸರ್ಗಿಕವಾಗಿ ಬರತಕ್ಕಂಥದ್ದು. ಸಾವಿರಾರು ಕೈಗಳು ಇದರಲ್ಲಿ ತೊಡಗಿವೆ. ಕುಡಿಯುವವರು ಕುಡಿಯುವದನ್ನು ಬಿಡಿಸಲಿಕ್ಕೆ ಸರ್ಕಾರಕ್ಕಂತೂ ಸಾಧ್ಯವಾಗುವುದಿಲ್ಲ. ಕುಡಿಯುವವರು ಕುಡಿದೇ ಕುಡಿಯುತ್ತಾರೆ. ಕ್ಲೋರೋ ಹೈಡ್ರೇಟ್ ಮಿಕ್ಸ್ ಮಾಡಿ ಸೇಂದಿ ಮಾರುವಂತಹವರನ್ನು ಚೆಕ್ ಮಾಡಲಿಕ್ಕೆ ನಿಮ್ಮ ಇಲಾಖೆ ಇದೆ. ಅದನ್ನು ಆ ನಿಟ್ಟಿನಲ್ಲಿ ಬಲಗೊಳಿಸಿ. ನೈಸರ್ಗಿಕವಾಗಿ ಸಿಗತಕ್ಕಂಥ ಸೇಂದಿಯನ್ನು ಇಳಿಸಲಿಕ್ಕೆ ಅನುಮತಿ ಕೊಡುವುದರಿಂದ ತೆಂಗಿನ ಬೆಳೆಗಾರರಿಗೂ ಅನುಕೂಲವಾಗುತ್ತದೆ ಮತ್ತು ಕುಡಿಯುವವರ ಆರೋಗ್ಯವೂ ಕೂಡ ಸುಧಾರಿಸುತ್ತದೆ. ಕೆಟ್ಟ ಸಾರಾಯಿ ಮಾರಾಟವನ್ನು ಸರ್ಕಾರ ಮೊದಲು ಬ್ಯಾನ್ ಮಾಡಲಿ. ಅದರ ಬದಲಾಗಿ ಸೇಂದಿಯನ್ನು ಇಳಿಸಲಿಕ್ಕೆ ಅನುಮತಿ ಕೊಡಿ ಎಂದು ನಾನು ರೈತರ ಪರವಾಗಿ ಸರ್ಕಾರವನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಎನ್. ಬಚ್ಚೇಗೌಡ : ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರಿಂದ ಒಂದು ವಿಷಯದ ಬಗ್ಗೆ ಸ್ಪಷ್ಟೀಕರಣವನ್ನು ಕೋರಬಯಸುತ್ತೇನೆ. ಹಿಂದೆ ಒಬ್ಬ ಮಾನ್ಯ ಸಚಿವರೇ ನುಸಿ ರೋಗ ತಡೆಯುವ ಸಲುವಾಗಿ ಸೇಂದಿ ಇಳಿಸಲಿಕ್ಕೆ ಅನುಮತಿ ನೀಡಲಾಗುತ್ತದೆ, ಈ ಬಗ್ಗೆ ಸಚಿವ ಸಂಪುಟದಲ್ಲಿ ತೀರ್ಮಾನ ತೆಗೆದುಕೊಳ್ಳಲಾಗುತ್ತಿದೆ ಎಂದು ಹೇಳಿದ್ದರು. ಆದರೆ ಈ ಮಾನ್ಯ ಗೃಹ ಸಚಿವರು ಅಂತಹ ತೀರ್ಮಾನ ತೆಗೆದುಕೊಳ್ಳುವುದಿಲ್ಲ ಎಂದು ಹೇಳುತ್ತಿದ್ದಾರೆ. ಈ ಬಗ್ಗೆ ಮಾನ್ಯ ಸಚಿವರು ಸ್ಪಷ್ಟೀಕರಣ ಕೊಡಬೇಕೆಂದು ಕೋರುತ್ತೇನೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು ಮೇಲ್ಮನೆಯಲ್ಲಿ ಮಾನ್ಯ ಸದಸ್ಯರಾದ ನಾಣಯ್ಯನವರ ಪ್ರಶ್ನೆಯೊಂದಕ್ಕೆ ಉತ್ತರಿಸುತ್ತಾ ಈ ಬಗ್ಗೆ ಹೇಳಿದ್ದಾರೆ. ತೆಂಗಿನ ಗಿಡಕ್ಕೆ ತಗುಲಿರುವ ನುಸಿ ರೋಗ ಕೇವಲ 'ನೀರಾ' ತೆಗೆದ ಮಾತ್ರಕ್ಕೆ ಹೋಗುವುದಿಲ್ಲ. ಈ ಬಗ್ಗೆ ಈಗಾಗಲೇ ಹಾರ್ಟಿಕಲ್ಚರ್ ಡಿಪಾರ್ಟ್‌ಮೆಂಟ್ ಅಧಿಕಾರಿಗಳು ಎಗ್ಸಾಮೀನ್ ಮಾಡಿದ್ದಾರೆ. ಇದು ಶಾಶ್ವತವಾದಂತಹ ಪರಿಹಾರವೇನೂ ಅಲ್ಲ, ಆದ್ದರಿಂದ ಈಗ ಸೇಂದಿಯನ್ನು ಇಳಿಸಲಿಕ್ಕೆ ಅವಕಟಶ ಮಾಡಿಕೊಟ್ಟರೆ ತೊಂದರೆಯಾಗುತ್ತದೆ. ಈ ಮಾತನ್ನು ಸರ್ಕಾರ ಈಗಾಗಲೇ ಹೇಳಿದೆ. ಆದ್ದರಿಂದ ಪುನಃ ಪುನಃ ಈ ಬಗ್ಗೆ ಸರ್ಕಾರವನ್ನು ಒತ್ತಾಯಿಸುವುದು ಬೇಡ. ಈಗಾಗಲೇ ಉಡುಪಿ ಮತ್ತು ಮಂಗಳೂರುಗಳಲ್ಲಿ ಸೇಂದಿ ಇಳಿಸಲು ಅನುಮತಿ ಇದೆ. ಆದರೂ ಕೂಡ ನುಸಿ ರೋಗ ಅಲ್ಲಿ ಇನ್ನೂ ಕೂಡ ಇದೆ. ನುಸಿ ರೋಗವನ್ನು ತಡೆಗಟ್ಟುವವರ ಬಗ್ಗೆ ಹಾರ್ಟಿಕಲ್ಚರ್ ಇಲಾಖೆಯವರು ಸಂಶೋಧನೆ ನಡೆಸಿ ಏನಾದರೂ ಒಂದು ಔಷಧಿಯನ್ನು ಕಂಡುಹಿಡಿಯುವುದೇ ಹೊರತಾಗಿ ಸೇಂದಿ ಇಳಿಸಲಿಕ್ಕೆ ಅನುಮತಿ ಕೊಡುವುದೇ ಇದಕ್ಕೆ ಪರಿಹಾರವಲ್ಲ, ಇದು ಸರಿಯಲ್ಲ ಎನ್ನುತ್ತಿಂಥ ಮಾತನ್ನು ನಾನು ಸ್ಪಷ್ಟವಾಗಿ ಇಲ್ಲಿ ಹೇಳಬಯಸುತ್ತೇನೆ.

ಹುಣಸೂರು ತಾಲ್ಲೂಕಿನಲ್ಲಿ ವಿದ್ಯುತ್ ಸರಬರಾಜಿನ ತೊಂದರೆ

142 (1705) ಶ್ರೀ ಪಾಪಣ್ಣ ವಿ (ಹುಣಸೂರು) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಣಸೂರು ತಾಲ್ಲೂಕಿನಲ್ಲಿ ವಿದ್ಯುಚ್ಛಕ್ತಿಯನ್ನು ವಿಪರಿಸಲು 2 ವಿತರಣಾ ಕೇಂದ್ರಗಳಿದ್ದು, ಈ ತಾಲ್ಲೂಕಿನ ಹನಗೋಡು ಹೋಬಳಿಯು ಅತಿ ದೊಡ್ಡ ಹೋಬಳಿಯಾಗಿದ್ದು, ಇದು ಕಾಡಿನ ಅಂಚಿನಲ್ಲಿದ್ದು ವಿದ್ಯುತ್ ಪೂರೈಸಲು ತುಂಬಾ ಅಡಚಣೆ ಉಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಈ ತಾಲ್ಲೂಕಿಗೆ ವಿದ್ಯುಚ್ಛಕ್ತಿಯನ್ನು ವಿತರಿಸಲು 3ನೇ ಹೊತರಣಾ ಕೇಂದ್ರವನ್ನಾಗಿ ಹನಗೋಡು ಗ್ರಾಮದಲ್ಲಿ ಸ್ಥಾಪಿಸಲು ಸರ್ಕಾರವು ತೆಗೆದುಕೊಂಡಿರುವ ಕ್ರಮವೇನು?

ಶ್ರೀ ವೀರಕುಮಾರ್ ಅಪ್ಪಾಸೋ ಪಾಟೀಲ್ (ಇಂಧನ ರಾಜ್ಯ ಸಚಿವರು)

ಅ) ಹುಣಸೂರು ತಾಲ್ಲೂಕಿಗೆ 2 ವಿದ್ಯುತ್ ವಿತರಣಾ ಕೇಂದ್ರಗಳಿಂದ ವಿದ್ಯುತ್ ಸರಬರಾಜಾಗುತ್ತಿರುವುದು ನಿಜ. ಈ ತಾಲ್ಲೂಕಿನ ಹನಗೋಡು ಹೋಬಳಿಯ ಪ್ರದೇಶಗಳಿಗೆ ವಿದ್ಯುತ್ ಸರಬರಾಜು ಮಾಡುವ 11 ಕೆ.ವಿ. ಫೀಡರ್ ಅರಣ್ಯ ಪ್ರದೇಶಗಳಲ್ಲಿ ಹಾದು ಹೋಗುತ್ತಿರುವುದರಿಂದ ಸಾಮಾನ್ಯವಾಗಿ ವಿದ್ಯುತ್ ಸರಬರಾಜಿನಲ್ಲಿ ಅಡಚಣೆ ಉಂಟಾಗುತ್ತಿರುತ್ತದೆ.

ಆ) ಈ ವಿಷಯವು ಪರಿಶೀಲನೆಯಲ್ಲಿರುತ್ತದೆ.

ಶ್ರೀ ವಿ.ಪಾಪಣ್ಣ : ಮಾನ್ಯ ಅಧ್ಯಕ್ಷರೇ, ಹುಣಸೂರು ತಾಲ್ಲೂಕಿನಲ್ಲಿ ಆದಷ್ಟು ಬೇಗನೇ ಮೂರನೇ ವಿತರಣಾ ಕೇಂದ್ರ ಮಾಡಿದರೆ ಮಾತ್ರ ಆ ಭಾಗದ ಹೋಬಳಿಗೆ ಅನುಕೂಲವಾಗುತ್ತದೆ. ಕಾಡಿನಿಂದ ಆನೆಗಳು, ಚಿರತೆಗಳು, ಕಾಡು ಹಂದಿಗಳು ಗ್ರಾಮಗಳಿಗೆ ನುಗ್ಗಿದಾಗ ಕಗ್ಗತ್ತಲು ಇದ್ದರೆ ಬಹಳ